ರಾಜ್ಯದ ಪ್ರಾಥಮಿಕ ಶಾಲೆಗಳಿಗೆ ಸಂಗೀತ ಮತ್ತು ಚಿತ್ರಕಲಾ ಶಿಕ್ಷಕರ ನೇಮಕ

2510 (2945) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದ ಪ್ರಾಥಮಿಕ ಶಾಲೆಗಳಿಗಾಗಿ ಸಂಗಿತ ಮತ್ತು ಚಿತ್ರಕಲಾ ವಿಷಯಗಳ ಶಿಕ್ಷಕರು ಎಷ್ಟು ಶಾಲೆಗಳಿಗೆ ಇರುವರು ಹಾಗೂ ಇವರುಗಳ ಕಾರ್ಯವ್ಯಾಪ್ತಿ ಎನು; (ವಿವರ ನೀಡುವುದು)

2) ರಾಜ್ಯದ ಎಷ್ಟು ಪ್ರೌಢಶಾಲೆಗಳಿಗೆ ಚಿತ್ರಕಲಾ ಮತ್ತು ಸಂಗಿತ ವಿಷಯಗಳ ಬೋಧನೆಯ ಶಿಕ್ಷಕರು ಇರುವರೇ (ಮಾಹಿತಿ ನೀಡುವುದು)

3) ಪ್ರತಿಯೊಂದು ಪ್ರೌಢಶಾಲೆಗಳಿಗೆ ಸಂಗಿತ ಮತ್ತು ಚಿತ್ರಕಲೆ ವಿಷಯ ಕಡ್ಡಾಯವಾಗಿ ಅಭ್ಯಾಸ ಮಾಡಲು ಶಿಕ್ಷಕರ ಅವಶ್ಯಕತೆ ಇರುವುದನ್ನು ಸರಕಾರ ಗಮನಿಸಿದೆಯೆ;

4) ಈ ವರ್ಷದಲ್ಲಿ ಪ್ರೌಢಶಾಲೆಗಳ ಸಂಖ್ಯೆಗನುಗುಣವಾಗಿ ರಾಜ್ಯದ ಎಲ್ಲಾ ಬೇಡಿಕೆಯ ಹುದ್ದೆಗಳನ್ನು ತುಂಬಲಾಗುವುದೇ? ವಿವರ ನೀಡುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಮಂಜೂರು ಆಗಿರುವ 228 ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ತುಂಬಲಾಗಿದೆ.

2) ರಾಜ್ಯದ ಪ್ರಾಥಮಿಕ ಶಾಲೆಗಳಿಗಾಗಿ ಸಂಗೀತ ಶಿಕ್ಷಕರು 16 ಶಾಲೆಗಳಲ್ಲಿ ಮಾತ್ರ ಇರುವರು. ಶಾಲೆಗಳಲ್ಲಿ ಸಂಗೀತ ಶಿಕ್ಷಣ ನೀಡುವರು.

2) ಪ್ರೌಢಶಾಲೆಗಳಲ್ಲಿ 198 ಜನ ಚಿತ್ರಕಲಾ ಶಿಕ್ಷಕರು ಮತ್ತು 59 ಜನ ಸಂಗೀತ ಶಿಕ್ಷಕರು ಇರುತ್ತಾರೆ.

3) ಹೌದು, ಗಮನಿಸಿದೆ. ಐಚ್ಛಿಕ ಬೋಧನೆ ಆಗತ್ಯ ಎಂದು ಕಂಡು ವಿಭಾಗೀಯ ಮಟ್ಟದಲ್ಲಿ ಒಟ್ಟು 497 ಮತ್ತು 181 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಂಡಿದೆ.

4) ಹೌದು, ಖಾಲಿಯಿರುವ ಪ್ರೌಢಶಾಲಾ ಸಹ ಶಿಕ್ಷಕರ 2000 ಹುದ್ದೆಗಳನ್ನು ಹುದ್ದೆಯನ್ನು ಪ್ರೌಢಶಾಲಾ ವಿಶೇಷ ಶಿಕ್ಷಕರ 961 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.